

# ಶಾಲಿನಿಯ ‘ಪ್ಲಸ್’ ಪಾಯಿಂಟ್!

ಇಲ್ಲಿಂದ ಮುಂದೆಲ್ಲ ಪ್ಲಸ್! ಇದು ‘ಪ್ಲಸ್’ ಚಿತ್ರದ ಮೂಲಕ ಕನ್ನಡ ಚಿತ್ರರಸಿಕರ ಎದುರು ನಿಲ್ಲುತ್ತಿರುವ ಶಾಲಿನಿ ವಡ್ನಿಕಟ್ಟಿ ಅವರ ಲೆಕ್ಕಾಚಾರ.

ಶಾಲಿನಿ ಹೈದರಾಬಾದ್‌ನ ಹುಡುಗಿ. ಹಾಗೆಂದು ಹೇಳಿ ಸುಮ್ಮನಾಗುವಂತಿಲ್ಲ. ಆಕೆ ಕನ್ನಡದ ಹುಡುಗಿಯೂ ಹೌದು. ಅಪ್ಪ ಬಳ್ಳಾರಿಯವರು, ಅಮ್ಮ ಆಂಧ್ರದವರು– ಹಾಗಾಗಿ ಶಾಲಿನಿಗೆ ಕನ್ನಡಮ್ಮನ ಮೇಲೆಯೂ ತೆಲುಗು ತಲ್ಲಿಯ ಮೇಲೆಯೂ ಸಮಾನ ನೆಚ್ಚು. ರೂಪದರ್ಶಿಯಾಗಿದ್ದ ಈ ಹುಡುಗಿ, ರ್‍ಯಾಂಪ್‌ನ ಮುಂದುವರಿಕೆಯ ಭಾಗವಾಗಿ ಚಿತ್ರರಂಗ ಪ್ರವೇಶಿಸಿದ್ದಾರೆ.

ಗಡ್ಡ ವಿಜಿ ನಿರ್ದೇಶನದ ‘ಪ್ಲಸ್’ ಚಿತ್ರದಲ್ಲಿ ಅನಂತನಾಗ್ ಮುಖ್ಯಪಾತ್ರದಲ್ಲಿ ನಟಿಸಿದ್ದಾರೆ. ‘ಅನಂತ್ ಅವರು ನಟಿಸುತ್ತಿದ್ದಾರೆ’ ಎನ್ನುವ ನಿರ್ದೇಶಕರ ಒಂದು ಮಾತೇ ಶಾಲಿನಿ ‘ಪ್ಲಸ್’ ಚಿತ್ರ ಒಪ್ಪಿಕೊಳ್ಳಲು ಸಾಕಾಗಿದೆ. ತಾನು ಆರಾಧಿಸುವ ಕಲಾವಿದ ಜೊತೆ ಅಭಿನಯಿಸಿದ ಅದೃಷ್ಟ, ಅವರಿಂದ ಪಾಠ ಹೇಳಿಸಿಕೊಂಡ ಸುವರ್ಣಾವಕಾಶ ಈ ಹುಡುಗಿಯದು. ಒಮ್ಮೆಯಂತೂ ಶಾಲಿನಿಯ ಅಭಿನಯಕ್ಕೆ ಅನಂತ್ ‘ವಾಹ್’ ಎಂದು ತಲೆದೂಗಿದ್ದರಂತೆ. ಚೊಚ್ಚಲ ಕನ್ನಡ ಸಿನಿಮಾ ಸ್ಮರಣೀಯವಾಗಲು ಯುವನಟಿಯೊಬ್ಬಳಿಗೆ ಇನ್ನೇನು ಬೇಕು? ಅಂದಹಾಗೆ, ಈಗಾಗಲೇ ತಮಿಳು ಚಿತ್ರವೊಂದರಲ್ಲಿ ನಟಿಸಿರುವ ಈಕೆಗೆ ‘ಪ್ಲಸ್’ ಎರಡನೇ ಸಿನಿಮಾ.

ಅನಂತನಾಗ್ ಅವರನ್ನು ಅವರ ವೃತ್ತಿಜೀವನದಲ್ಲೇ ಅತ್ಯಂತ ಭಿನ್ನವಾಗಿ ತೋರಿಸಲಾಗಿದೆ ಎನ್ನುವ ಕಾರಣಕ್ಕಾಗಿ ‘ಪ್ಲಸ್’ (ಅ. 16ರಂದು ತೆರೆಗೆ) ಗಾಂಧಿನಗರದ ಗಮನಸೆಳೆದಿದೆ. ನಟ ರವಿಶಂಕರ್ ಹಾಗೂ ಅಚ್ಯುತ ಅವರಿಗೆ ಈ ಚಿತ್ರದಲ್ಲಿ ಗಮನಾರ್ಹ ಪಾತ್ರಗಳಿವೆಯಂತೆ. ‘ದ್ಯಾವ್ರೇ’ ಮೂಲಕ ಸಹೃದಯರ ಗಮನಸೆಳೆದಿದ್ದ ವಿಜಿಗೆ ‘ಪ್ಲಸ್’ ಗೆಲುವಿಗೆ ಬಗ್ಗೆ ಅಪಾರ ನಿರೀಕ್ಷೆಗಳಿವೆ.

# ರಂಗುರಂಗು ಗೆಲುವು!

ಅನೂಪ್ ಭಂಡಾರಿ ನಿರ್ದೇಶನದ ‘ರಂಗಿತರಂಗ’ ಸಿನಿಮಾ ಶತದಿನ ಪ್ರದರ್ಶನ ಪೂರೈಸಿದೆ. ಹೊಸ ಪ್ರತಿಭೆಗಳ ಈ ಸಿನಿಮಾ ಗೆಲುವಿನ ಜೊತೆಗೆ ಒಂದಿಷ್ಟು ದಾಖಲೆಗಳನ್ನೂ ತನ್ನದಾಗಿಸಿಕೊಂಡಿದೆ. ಅಮೆರಿಕದ 72 ಕೇಂದ್ರಗಳಲ್ಲಿ ಬಿಡುಗಡೆಯಾಗುವ ಮೂಲಕ ಗಮನಸೆಳೆದ ಈ ಸಿನಿಮಾ, ವಿದೇಶಗಳಲ್ಲಿ ಹೆಚ್ಚು ಗಳಿಕೆ ಮಾಡಿದ ಕನ್ನಡ ಸಿನಿಮಾ ಎನ್ನುವ ಅಗ್ಗಳಿಕೆಯನ್ನೂ ತನ್ನದಾಗಿಸಿಕೊಂಡಿದೆ.



‘ರಂಗಿತರಂಗ’ ಸಿನಿಮಾದ ಗೆಲುವಿನಲ್ಲಿ ಕನ್ನಡ ಚಿತ್ರರಂಗಕ್ಕೆ ಒಂದಷ್ಟು ಪಾಠಗಳು ಇರುವಂತಿದೆ. ಒಂದೆಡೆ ತಾರಾ ವರ್ಚಸ್ಸಿನ ನಾಯಕರ ಸಿನಿಮಾಗಳು ಸೋಲುತ್ತಿರುವ ಸಂದರ್ಭದಲ್ಲಿ ‘ರಂಗಿತರಂಗ’ದಂಥ ತಾರೆಗಳಿಲ್ಲದ ಹಾಗೂ ಮಧ್ಯಮ ಬಜೆಟ್‌ನ ಸಿನಿಮಾ ದೊಡ್ಡ ಗೆಲುವು ಸಾಧಿಸಿರುವುದು ಗಮನಾರ್ಹ. ಹೊಸ ರೀತಿಯ ಪ್ರಾಮಾಣಿಕ ಪ್ರಯತ್ನಗಳನ್ನು ಪ್ರೇಕ್ಷಕರು ಬೆಂಬಲಿಸುತ್ತಾರೆ ಎನ್ನುವುದಕ್ಕೆ ಕೂಡ ಈ ಸಿನಿಮಾ ಉದಾಹರಣೆಯಾಗಿದೆ. ಅಂತೆಯೇ ಸಿನಿಮಾದ ಪ್ರಚಾರಕ್ಕೆ ಸಾಮಾಜಿಕ ಜಾಲತಾಣಗಳನ್ನು ಯಾವ ರೀತಿ ಬಳಸಿಕೊಳ್ಳಬಹುದು ಎನ್ನುವುದಕ್ಕೂ ‘ರಂಗಿತರಂಗ’ ಮಾದರಿಯಂತಿದೆ.

‘ಬಾಹುಬಲಿ’ಯಂಥ ಅದ್ದೂರಿ ಚಿತ್ರದ ಬಿರುಗಾಳಿಯ ನಡುವೆಯೂ ಅಸ್ತಿತ್ವ ಉಳಿಸಿಕೊಂಡಿದ್ದು ‘ರಂಗಿತರಂಗ’ದ ಬಹುದೊಡ್ಡ ಸಾಧನೆ. ಇದು ಚಿತ್ರತಂಡವೊಂದರ ಪ್ರಾಮಾಣಿಕತೆ ಹಾಗೂ ಬದ್ಧತೆಗೆ ಸಂದ ಜಯವೂ ಆಗಿದೆ. ನಿರೂಪ್ ಭಂಡಾರಿ, ಆವಂತಿಕಾ ಶೆಟ್ಟಿ, ರಾಧಿಕಾ ಚೇತನ್ ಅವರಂಥ ಹೊಸಬರ ಜೊತೆಗೆ ಸಾಯಿಕುಮಾರ್ ಅವರಂಥ ಕಸುಬುದಾರ ಕಲಾವಿದರು ಚಿತ್ರವನ್ನು ಕಳೆಗಟ್ಟಿಸಿದ್ದರು.

‘ರಂಗಿತರಂಗ’ದ ಬೆನ್ನಿಗೆ ತೆರೆ ಕಂಡ ‘ಆಟಗಾರ’, ‘ಕೆಂಡಸಂಪಿಗೆ’, ‘ನಾನು ಅವನಲ್ಲ.. ಅವಳು’ ಸಿನಿಮಾಗಳು ಕೂಡ ಪ್ರೇಕ್ಷಕರ ಗಮನಸೆಳೆದಿವೆ. ಇವು ಕೂಡ ತಾರಾವರ್ಚಸ್ಸಿಗೆ ಹೊರತಾದ ಸಿನಿಮಾಗಳು ಎನ್ನುವುದು ಗಮನಾರ್ಹ.

■ ರಘು